
ಆರ್. ಮಧುಸೂದನ್, ಹಾಸನ
ಡಾಕ್ಟರ್‌ದು ಕೈಗುಣ; ಹೆಣ್ಣಿನದು ಕಾಲ್ಗುಣ. ಗಂಡಿನದು?



call answering ಗುಣ.

ರಮೇಶ ಬೊಂಗಾಳೆ, ಬೈಲಹೊಂಗಲ
ಎಲ್ಲ ಪರೀಕ್ಷೆಗಳಲ್ಲಿಯೂ ವಿದ್ಯಾರ್ಥಿಗಳದೇ ಮೇಲುಗೈ ಎಂದು ಯಾವಾಗ ಬರಬಹುದು?
ವಿದ್ಯಾರ್ಥಿನಿಯರಿಗೆ ವಿವಿಧ ರೀತಿಯಲ್ಲಿ ಆಶೀರ್ವದಿಸುವ ಪರೀಕ್ಷೆಗಳನ್ನು ಏರ್ಪಡಿಸಿದಾಗ.

ಎನ್. ವೈದೇಹಿ, ಮೈಸೂರು
ಶ್ರೇಷ್ಠ ಪದವಿ, ಅನುಭವ ಇದ್ದವರೂ ಕೆಲವೊಮ್ಮೆ ಅನ್ಯರೊಡನೆ ಚರ್ಚಿಸದೆ ತಪ್ಪು ನಿರ್ಧಾರ ಕೈಗೊಳ್ಳುವುದೇಕೆ?
ತಾವು ಜ್ಞಾನಸಾಗರವನ್ನು ಆಪೋಶನ ತೆಗೆದುಕೊಂಡಿರುವ ಅಗಸ್ತ್ಯರೆಂಬ ಭ್ರಮೆ.

ಕಾಳಿಹುಂಡಿ ಶಿವಕುಮಾರ್, ಮೈಸೂರು
ಅವಳು 'ಸುಧಾ'ಳ 'ನಕ್ಕುಬಿಡಿ' ಅಂಕಣವನ್ನು ತಪ್ಪದೆ ಓದುವಳಲ್ಲ...?



ಶಿಕ್ಷಕಿಯಂತೆ. ಶೀರ್ಷಿಕೆಗೆ ತಕ್ಕಂತೆ ಇದೆಯೇ ಎಂದು ಪರೀಕ್ಷಿಸಲು ಓದುವಳಂತೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ತ್ರೇತಾಯುಗದ ರಾಮನು ನಿಮ್ಮಂತೆ ಕೇಳುಗರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದನಾ?
ಊಹೂಂ. ಪ್ರಶ್ನೆಗಳೇ ಏಳದ ರೀತಿಯಲ್ಲಿ ಜನರನ್ನು ನಿಭಾಯಿಸುತ್ತಿದ್ದ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ರಾಜಕೀಯದಲ್ಲಿ 'ಕಿಂಗ್ ಮೇಕರ್ಸ್' ಇರುವಂತೆ 'ಕ್ವೀನ್ ಮೇಕರ್ಸ್' ಇರುವುದಿಲ್ಲವೇಕೆ?
ಕಿಂಗ್ ಹತೋಟಿಯಲ್ಲಿರುತ್ತಾನೆ; ಕ್ವೀನ್ ಹತೋಟಿಗೆ ತೆಗೆದುಕೊಂಡುಬಿಡುತ್ತಾಳೆ.

ಮುರಲೀಧರ ಕುಲಕರ್ಣಿ, ಬೀದರ
'ಹುಟ್ಟುಮುಂಡೆ ಮದುವೇಲಿ ಉಂಡವನೇ ಜಾಣ' ಎಂಬ ಗಾದೆ ಯಾವಾಗ ಹುಟ್ಟಿತು?
ಆ ಗಂಡನಿಗೂ ಊಟ ಮಾಡಿದರೆ ಗಂಡಾಂತರ ಎಂಬ ಪರಿಸ್ಥಿತಿ ಉದ್ಭವಿಸಿದಾಗ.

ರವಿಕಾಂತ ಎಂ.ಕೆ. ತುಮಕೂರು
ಭಗವಂತನಿಗೂ ಫಲಗಳ ಹಾರ ಅರ್ಪಿಸದವರು ರಾಜಕಾರಣಿಗಳಿಗೇಕೆ ಅವನ್ನು ಅರ್ಪಿಸುತ್ತಾರೆ?
ಗೆದ್ದಮೇಲೆ 'ಫಲಾಹಾರ'ವಷ್ಟೇ ಕಬಳಿಸಿ; ಪಟ್ಟಾಗಿ ಹೊಡೆಯಲು ಕೂರಬೇಡಿ ಎಂಬ ಸಂದೇಶವಂತೆ.

ಬಿ. ಚಂದ್ರೇಗೌಡ, ಬೆಂಗಳೂರು
ಯೋಗಾಯೋಗ ಎಂದರೇನು?
ಮಂತ್ರಿಗಿರಿ, ಲೂಟಿಗಳು ಯೋಗ; ನಂತರದ ರೈಡ್‌ಗೆ ಆಯೋಗ.

ಜಿ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ಈ ಪ್ರಪಂಚದಲ್ಲಿ ಯಾರು ಪರಿಪೂರ್ಣರು?
ನೆರೆಮನೆಯ ಪರಿಮಳ ಮತ್ತು ಪೂರ್ಣಪ್ರಜ್ಞರ ಮಗನಿಗೆ ಹಾಗೆಂದು ಹೆಸರಿಟ್ಟಿದ್ದಾರೆ.

ಜಗದೀಶ ಬಿ. ಹೊಸೂರು, ಮೈಸೂರು
ವಿದ್ಯಾರ್ಥಿಗಳು ಪರೀಕ್ಷೆ ಹತ್ತಿರ ಬಂದಾಗ ಮಾತ್ರ ಸರಸ್ವತಿ ಪೂಜೆ ಮಾಡುತ್ತಾರೆ. ಏಕೆ?
ಆಗಲೇ ತಮಗೆ ಏನೇನೂ ತಿಳಿಯದೆಂಬ ಜ್ಞಾನೋದಯ ಆಗುವುದರಿಂದ.

ಮಹಾವೀರ ಕಾಸರ, ಶಿವಮೊಗ್ಗ
ಹುಡುಗಿಯನ್ನು ಬಟ್ಟೆಗೂ, ಹುಡುಗನನ್ನು ಮುಳ್ಳುಬೇಲಿಗೂ ಹೋಲಿಸುವ ಉದ್ದೇಶವೇನು?
ಹರಿದ ಬಟ್ಟೆ ಟೋರ್ನ್ ಜೀನ್ಸಿನ ಡುಡೆಟ್ಟನ್ನೂ, ಚೂಪು ಬೇಲಿ ಡೂಡ್‌ನ ದೃಷ್ಟಿಯನ್ನೂ ಸೂಚಿಸುವುದಂತೆ.

ಬಾ.ರಾ. ಸುರೇಶ್, ಶಿವಮೊಗ್ಗ
ಬದುಕು ಬಂಗಾರವಾಗಲು ಏನು ಮಾಡಬೇಕು?
ಅಜ್ಞಾನದ ಗಣಿಯಿಂದ ಹೊರಬಂದು ವಿದ್ಯೆಯಿಂದ ನಗವಾಗಿ, ಸಂಸ್ಕಾರದ ಪಾಲಿಷ್ ಪಡೆಯಬೇಕು.

## ಬಹುಮಾನಿತ ಪ್ರಶ್ನೆ

ಡಾ.ಸೀಮಂತಿನಿ ದೇಸಾಯಿ, ಬೆಂಗಳೂರು
ನಾನು ನನ್ನನ್ನು ಬುದ್ಧಿವಂತಳೆಂದು ಭಾವಿಸಿ ವೋಟ್ ಹಾಕಿದ ಪಕ್ಷ ಮುಳುಗಿತೇಕೆ ಅತಿಬುದ್ಧಿವಂತ ರಾಂ?
ಕತ್ತೆಗಳನ್ನು ನಿಲ್ಲಿಸಿ ಕುದುರೆಗಳೆಂದು ತೋರಿಸಿದ್ದರಿಂದ.

ಅನಸೂಯ ಟಿ, ಕೇದಿಗೆಮನೆ
ಮಕ್ಕಳಿಗಾಗಿ ಆಸ್ತಿ ಮಾಡಬಾರದಂತೆ ಹಾಗೂ ಸಾಲವನ್ನೂ ಮಾಡಬಾರದಂತೆ. ಹೌದಾ ಗೆಳತಿ?
ಮಕ್ಕಳನ್ನೇ ಆಸ್ತಿಯಾಗಿಸಿ, ಮೊದಲ ಸಾಲ ವ್ಯಕ್ತಿಗಳನ್ನಾಗಿಸು ಸಖಿ.

ಎಂ.ಸಿ. ಧನ್ಯತಾ, ಬೆಂಗಳೂರು
siteಗೂ sightಗೂ ಏನು ವ್ಯತ್ಯಾಸ?
site ಎಲ್ಲೆಯಲ್ಲೇ ಇರುತ್ತದೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ರಾಜಕಾರಣಿಯ ಬೊಜ್ಜಿಗೂ, ಪೊಲೀಸನ ಬೊಜ್ಜಿಗೂ ವ್ಯತ್ಯಾಸವೇನು?



ಅದರಿಂದ ವೈದ್ಯನಿಗೆ ಲಾಭ; ಇದರಿಂದ ಓಡುವ ಕಳ್ಳನಿಗೆ ಲಾಭ.

ಎಸ್ಸೆನ್ ಮಹಾಬಲರಾವ್, ಎನ್ನರ್ರುರ
ಪ್ರೇಮ ಎಷ್ಟು, ಕಾಮ ಎಷ್ಟು ತಿಳಿಯದ ದಡ್ಡಿಯೊಂದಿಗೆ ಏಗುವುದು ಹೇಗೆ?
ಪಶುವಾಗದೆ ಪತಿಯಾಗಿ ವರ್ತಿಸುವ ಮೂಲಕ.

ಎನ್.ವಿ. ಶ್ರೀನಿವಾಸ್, ಮೈಸೂರು
'ಚಿಂದಿ'ಯಿಂದ 'ಚಿತ್ರಾನ್ನ' ಮಾಡಲು ಏನೇನು ಬೇಕು? ಮಾಡೋದು ಹೇಗೆ?
**Coriander** (ಕೊತ್ತಂಬರಿ) **Haldi** (ಅರಿಶಿನ) **Ing** (ಇಂಗು) **Nut** (ತೆಂಗು) **Dals** (ಬೇಳೆ) **Imali** (ಹುಣಿಸೆಯ ಬದಲು ಲಿಂಬೆ)!

■ **ರಾಮ್**